CW.1 PW.1

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.1047/2021

| | |
|---|---|
| ಸಾಕ್ಷಿದಾರರ ಹೆಸರು | ಪ್ರಮೋದ್ |
| ತಂದೆಯ ಹೆಸರು | ಬೋಳಪ್ಪ |
| ವಯಸ್ಸು | 29 ವರ್ಷ |
| ವೃತ್ತಿ | ಖಾಸಗಿ |
| ವಿಳಾಸ | ಅರತಕಲ್ಲು, ಕೃಷ್ಣಗಿರಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 22.01.2026 |

**ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-**

ಆರೋಪಿಯನ್ನು ನೋಡಿರುವುದಿಲ್ಲ. ಚಾಸಾ-2 ರಿಂದ 9 ರವರ ಪರಿಚಯ ಇರುತ್ತದೆ.

ನಾನು ಯಾವುದೇ ಅಪಘಾತವನ್ನು ನೋಡಿರುವುದಿಲ್ಲ ಸುಮಾರು ವರ್ಷಗಳ ಹಿಂದೆ ನನ್ನ ತಂದೆಯಾದ ಬೋಳಪ್ಪ ರವರಿಗೆ ಅಪಘಾತವಾಗಿರುತ್ತದೆ. ಸದರಿ ಅಪಘಾತವೂ ಯಾರ ತಪ್ಪಿ ನಿಂದ ಮತ್ತು ಹೇಗೆ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಪೋಲೀಸರು ನನ್ನನ್ನು ಅಪಘಾತದ ವಿಚಾರವಾಗಿ ಸುಮಾರು 3-4 ವರ್ಷಗಳ ಹಿಂದೆ ಠಾಣೆಗೆ ಕರೆಸಿದ್ದು ಅಲ್ಲಿ 2-3 ಖಾಲಿ ಬಿಳಿಯ ಹಾಳೆಗಳಿಗೆ ನನ್ನ ಸಹಿ ಪಡೆದುಕೊಂಡಿರುತ್ತಾರೆ. ನನಗೆ ಯಾವುದಕ್ಕೆ ಮತ್ತು ಯಾವ ಕಾರಣಕ್ಕೆ ಸಹಿ ಪಡೆದಿರುತ್ತಾರೆ ಎಂದು ಗೊತ್ತಿಲ್ಲ.

ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆ ದೂರು ಆಗಿದ್ದು ಅದನ್ನು ಈಗ ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನನ್ನನ್ನು ಪೋಲೀಸರು ಯಾವುದೇ ಪಂಚನಾಮೆಗೆ ಕರೆದಿರಲಿಲ್ಲ ಹಾಗೂ ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ.

ಸಾಕ್ಷಿಗೆ ಸದರಿ ಪ್ರಕರಣದ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಕೇವಲ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗ ನಿಪಿ-2 ಎಂದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸ.ಸ ಅ ರವರು ಸಾಕ್ಷಿಯನ್ನು ಪಾಟೀ ಸವಾಲನ್ನು ಮಾಡಲು ಅನುಮತಿ ನೀಡಲು ಕೋರಿದ ಮೇರೆಗೆ ಅನುಮತಿ ನೀಡಲಾಯಿತು).**

**ಪಾಟೀ ಸವಾಲುಃ ಸ. ಸ. ಅ. ರವರಿಂದ**

ನಾನು ದಿನಾಂಕ 02.11.2019 ರಂದು ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ನಾನು ಪೋಲೀಸರಿಗೆ ಆರೋಪಿಯ ವಿರುದ್ದ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿನಾಂಕ 03.11.2019 ರಂದು ಶ್ರೀ ವೆಂಕಟೇಶ್ವರ ಕನ್ವೆಷನಲ್ ಹಾಲ್ ಮುಂದಿನ ಕನಕಪುರ-ಬೆಂಗಳೂರು ಹೆದ್ದಾರಿ ರಸ್ತೆಯಲ್ಲಿ ಬೂದಿಕುಪ್ಪೆ ಗೇಟ್ ಕನಕಪುರ ಟೌನ್ ಬಳಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಸಂಜೆ 5.30 ರಿಂದ 6.30 ಗಂಟೆಯವರೆಗೂ ಈಗ ಓದಿ ಹೇಳಿದಂತೆ ಮಹಜರ್ ಮಾಡಿ ಸ್ಥಳದಲ್ಲಿ ಅಪಘಾತಕ್ಕೆ ಒಳಗಾದ ಮತ್ತು ಅಪಘಾತ ಪಡಿಸಿದ ವಾಹನಗಳನ್ನು ಅಮಾನತು ಪಡಿಸಿಕೊಂಡು ನಮ್ಮಗಳ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

CW.1 PW.1

ಅದೇ ರೀತಿ ದಿನಾಂಕ 16.11.2019 ರಂದು ಈಗ ಸವಿಸ್ತಾರವಾಗಿ ಓದಿ ಹೇಳಿದಂತೆ ಮುಂದುವರಿದ ಹೇಳಿಕೆಯನ್ನು ಕೊಟ್ಟಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯ ದಾಖಲೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಾನು ಮತ್ತು ಆರೋಪಿ ರಾಜಿ ಮಾಡಿಕೊಂಡಿರುತ್ತೇವೆಂನದರೆ ಸರಿ. ಆದ್ದರಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ವಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಏನೂ ಇರುವುದಿಲ್ಲ**

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**